Review Of Research
**Vol.1,Issue.VI/March;12** **ISSN:-2249-894X**

# ಶರಣರ ವಚನಗಳಲ್ಲಿ ಸಹಕಾರದ ನೆಲೆಗಳು

*ಡಾ. ಗಂಗಾಂಬಿಕಾ ಪಾಟೀಲ*

*ಕನ್ನಡ ಸಹ -ಪ್ರಾಧ್ಯಾಪಕರು*

*ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಬೀದರ*

---

ಶರಣರ ವಚನಗಳಲ್ಲಿ ಸಹಕಾರದ ನೆಲೆಗಳನ್ನು ಹುಡುಕುವ ಮುನ್ನ ಸಹಕಾರ ಪದವನ್ನು ಕುರಿತು ಚಿಂತನ ಮಾಡುವುದು ಸೂಕ್ತ. ಆಗ ಶರಣರ ವಚನ ಸಾಹಿತ್ಯದಾಗಸದ್ಲಲಿಯ ನಕ್ಷತ್ರಗಳು ಮಿನುಗತೊಡಗುತ್ತವೆ. "ಸಹ" ಎಂದರೆ ಕೂಡಿ, ಸೇರಿ, ಜೊತೆ. "ಕಾರ" ಎಂಬುದು ಮಾಡುವ ನೆರವೇರಿಸುವ ಕ್ರಿಯೆ. ಸಹಜೀವಿಯ ಬಗೆಗಿನ ಸಹಾನುಭೂತಿಯೇ ಸಹಕಾರ. ಇದು ಕ್ರಿಮಿಕೀಟಗಳಿಂದ ಹಿಡಿದು, ಮಾನವನವರೆಗೂ ಬದುಕಿನ ಜೀವನಾಡಿ. ಹುಟ್ಟಿನೊಂದಿಗೇ ಬೆಸೆದದ್ದು- ಕುಟುಂಬದಿಂದಲೇ ಪ್ರಾರಂಭವಾಗುತ್ತದೆ.

ಸಹಕಾರದ ಮೂಲ ಮಂತ್ರ ಒಗ್ಗಟ್ಟು. ಇಲ್ಲಿ ಬಡವ-ಬಲ್ಲಿದ, ಸ್ತ್ರೀ-ಪುರುಷ ಎಂಬ ಭೇದವಿಲ್ಲ. ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಪ್ರತಿಯೊಬ್ಬರೂ ಶ್ರಮವಹಿಸಿ ದುಡಿಯುವುದೇ ಇದರ ಮೂಲೋದ್ದೇಶ. ಕೂಡಿ ಬಾಳುವುದು, ಕೂಡಿ ಬೆಳೆಯುವುದು, ಕೂಡಿ ಬಲಗೊಂಡು, ಕೂಡಿ ಕಾರ್ಯಗೈದು, ತನ್ಮೂಲಕ ತೇಜಸ್ವಿಗಳಾಗುವುದು. ಇದರಲ್ಲಿಯೇ ವ್ಯಕ್ತಿ, ರಾಷ್ಟ್ರ ಮತ್ತು ವಿಶ್ವದ ಶಾಂತಿ ಅಡಗಿದೆ ಎಂಬುದು ನಮ್ಮ ದಾರ್ಶನಿಕರು ಕಂಡುಕೊಂಡ ಸತ್ಯ. ಈ ಸಹಕಾರ ಸಂಸ್ಥೆಗಳಲ್ಲಿ ಸದಸ್ಯರೇ ಆಡಳಿತಾಧಿಕಾರಿಗಳು, ಧಣಿಗಳೂ, ದುಡಿಯುವವರೂ, ಲಾಭ-ನಷ್ಟಗಳಿಗೆ ಹೊಣೆಗಾರರೂ ಅವರೇ ಆಗಿರುತ್ತಾರೆ.

ಇನ್ನು ಮುಖ್ಯವಾಗಿ ಸಹಕಾರ ಒಂದು ವಿಶೇಷ ರೀತಿಯ ಆರ್ಥಿಕ ಜೀವನಕ್ರಮವನ್ನು ರೂಪಿಸುವ ಸಾಧನ. ಇಂಥ ಆರ್ಥಿಕ ಕ್ರಮಕ್ಕೆ ಸಹಕಾರ ಪದ್ಧತಿ ಎಂಬ ಹೆಸರು. ಬಂಡವಾಳವನ್ನು ಎಲ್ಲರ ಹಿತಕ್ಕಾಗಿ ವಿನಿಯೋಗಿಸುವುದು ಸಹಕಾರ ಮಾರ್ಗ. ಇದು ಪ್ರಾರಂಭವಾದದ್ದು ಇಂಗ್ಲೆಂಡಿನಲ್ಲಿ ೧೮ ನೇ ಶತಮಾನದಲ್ಲಿ ಎಂದು ಹೇಳಲಾಗುತ್ತಿದೆ. ಆದರೆ ಕನ್ನಡ ನಾಡಿನಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ಪ್ರಾರಂಭವಾಯಿತೆಂಬುದು ವಚನ ಸಾಹಿತ್ಯದ ಅಧ್ಯಯನದಿಂದ ವಿದಿತವಾಗುತ್ತದೆ. ವಚನ ಸಾಹಿತ್ಯದ ನಿರ್ಮಾಪಕರಾದ ಬಸವಾದಿ ಶರಣರ ಒಟ್ಟು ಬದುಕಿನ ಬುನಾದಿಯೇ ಸಹಕಾರವಾಗಿತ್ತು.

> "ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ,
> ಗಣತಿಂದಿಣಿಯೊಳಗಿರಿಸೆನ್ನ ಲಿಂಗವೇ"

ಎಂದು ದೇವರಿಗಿಂತಲೂ ಶರಣ ಸಂಗಕ್ಕೆ ಪ್ರಾಮುಖ್ಯ ನೀಡಿದ ಬಸವಣ್ಣನವರ ಮಾತು ಸಂಘಜೀವನದ ಅಗತ್ಯತೆಯ ತೀವ್ರತೆಯನ್ನು ತಿಳಿಸುತ್ತದೆ. ವ್ಯಕ್ತಿಗೂ ಸಂಗಕ್ಕೂ ಮೀನು ನೀರಿನಂಥ ಸಂಬಂಧ, ಅಷ್ಟೇ ಅಲ್ಲ, ವ್ಯಕ್ತಿ ಸಮಾಜದಲ್ಲಿ ಸಹಕಾರದಿಂದ ಬಾಳಲೇಬೇಕಾದುದು ಅನಿವಾರ್ಯ ಎಂಬುದು ಶರಣರ ನಿಲುವು.

> ತೊಟ್ಟು ಬಿಡದನ್ನಕ್ಕ ಮತ್ತಾ ಬುಡದಾಸೆ ಬೇಕು,
> ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ
> ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು,
> ಅಮರೇಶ್ವರ ಲಿಂಗವನರಿವುದಕ್ಕೆ.

ತೊಟ್ಟಿಗಿದ್ದ ಹಣ್ಣು ಬುಡದ ಹಿತವನ್ನಪೇಕ್ಷಿಸುವಂತೆ, ಜೀವನದ ತೊಟ್ಟಿಗೆ ಅಂಟಿಕೊಂಡ ವ್ಯಕ್ತಿ ಸಮಾಜದ ಹಿತವನ್ನು ಬಯಸುವುದರಲ್ಲಿ ಪರಸ್ಪರ ಒಳಿತಿದೆ. ತಾನೊಬ್ಬ ಸುಖಿಯಾದರೆ ಸಾಕು, ಎಂಬ ಸ್ವಾರ್ಥಕ್ಕೆ ಇಲ್ಲಿ ಅವಕಾಶವಿಲ್ಲ.

> "ಲಿಂಗವ ಪೂಜಿಸುತ್ತ ಜಂಗಮದ ಮುಖವ
> ನೋಡುತ್ತಿಪ್ಪ ಸುಖವ ಕೊಡು ಕಂಡಾ ಲಿಂಗವೆ."

ಶರಣರು ಜಂಗಮ ಪದವನ್ನು ಹತ್ತಾರು ಅರ್ಥಗಳಲ್ಲಿ ಬಳಸಿದ್ದಾರೆ. ಅದರಲ್ಲಿ ಸಮಾಜ ಎಂಬುದೂ ಒಂದು. ವ್ಯಷ್ಟಿ ಸುಖಕ್ಕಿಂತ ಸಮಷ್ಟಿ ಸುಖದತ್ತ ಪ್ರತಿಯೊಬ್ಬರ ಒಲವುಂಟಾದಾಗಲೇ ಸುಖೀ ಸಮಾಜ ನಿರ್ಮಾಣವಾಗುತ್ತದೆ.

"ಮಾಡಿದರು, ಮಾಡಿದರು ತಮ್ಮ ಹಿತಕ್ಕಲ್ಲದೆ
ಮತ್ತಾರ ಹಿತಕ್ಕಲ್ಲ ನೋಡಯ್ಯಾ,
ನೋಡಿದರು, ನೋಡಿದರು ತಮ್ಮ ಹಿತಕ್ಕಲ್ಲದೆ
ಮತ್ತಾರ ಹಿತಕ್ಕಲ್ಲ ನೋಡಯ್ಯ,
ತನ್ನ ಬಿಟ್ಟನ್ಯಹಿತವ ನೋಡಿದಡೆ ಕೂಡಿಕೊಂಬ
ನಮ್ಮ ಕಪಿಲಸಿದ್ಧ ಮಲ್ಲಯ್ಯನವರ"

ಶಿವಯೋಗಿ ಸಿದ್ಧರಾಮೇಶ್ವರರು ದೇವರಿಗೂ ಅನ್ಯಹಿತ ಬಯಸುವ ಸಹಕಾರ ಗುಣವೇ ಪ್ರೀಯವಾದುದು ಎನ್ನುತ್ತಾರೆ. ಲಿಂಗಯ್ಯನೇ ಜಂಗಮದಲ್ಲಿ ಸಮಾಹಿತನಾಗಿದ್ದಾನೆ. ಸಮಾಜದ ಹಿತವೇ ನಿಜವಾದ ದೇವಪೂಜೆ ಎಂಬುದು ಶರಣರ ಅಭಿಪ್ರಾಯ.

"... ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೇ,
ಜಂಗಮದೊಳೊಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ....."

ಎನ್ನುತ್ತಾರೆ ಬಸವಣ್ಣನವರು.

ದೇವರು ಸರ್ವಭೂತಗಳಲ್ಲಿ ಇದ್ದಾನೆಎಂದು ಮಾತಿನಲ್ಲಿ ನುಡಿಯದೆ, ತನು ಮನ ಧನವನ್ನು ಸರ್ವ ಭೂತಗಳ ಹಿತಕ್ಕಾಗಿ ಸವೆಸುವಲ್ಲಿ ಕೃತಿಗಿಳಿಯಬೇಕು.

ಸರ್ವ ಭೂತಾತ್ಮನೆಂಬ ಮಾತಿನ ಮಾಲೆಯಲ್ಲಿ ಹೋಗದು,
ತನುಮನಧನವ ಸವೆಸಲೇಬೇಕು.
ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು.

ಇದ್ದವರು ಸಂಗ್ರಹದಂಥ ಸ್ವಾರ್ಥ ಬುದ್ಧಿಗೆಡೆಗೊಡದೆ, ಇಲ್ಲದವರಿಗಾಗಿ ಸವೆಸುವ ಕಾರ್ಯದಲ್ಲಿ ತೊಡಗಬೇಕು. ಸಂಗ್ರಹ ಕೂಡ ಜೇನಿನ ಸಂಗ್ರಹವಾಗಿ, ಸರ್ವರಿಗೂ ಸದುಪಯೋಗವಾಗುವಂತಿರಬೇಕು ಎಂಬುದನ್ನು ಮಾರ್ಮಿಕವಾದ ಉದಾಹರಣೆಯ ಮೂಲಕ ತಿಳಿಸುತ್ತಾರೆ.

ಬಾಳತ್ವಕ್ಕೆಂದು ಮಧುವ ತಂದು,
ಕೊಡನ ತುಂಬಿದ ಜೇನ ಹುಳುವಿನಂತೆ ತಾನುಂಬುದು,
ತನ್ನೆಂಜಲ ಜಗವುಂಬುದು ನೋಡಯ್ಯಾ,
ಶಿವಭಕ್ತನಾಗಿ ಶಿವಾನ್ನವನೆ ಕೊಂಡು,
ಒಕ್ಕಮಿಕ್ಕ ವಸ್ತುವ ಜಂಗಮಕ್ಕಿಕ್ಕುವಾತನೆ ಭಕ್ತ,
ಕೊಂಡಾತನೇ ಜಂಗಮ, ನಡುವೆ ನೀ ಬಂದು
ಭಂಡು ಮಾಡದಿರೈ ಕೂಡಲಸಂಗಮದೇವಾ

ಜನತೆಯ ಭೌತಿಕ ಪ್ರಗತಿಗೆ ಸಂಪತ್ತು ಮೂಲ. ಅದು ಕಾಯಕದಿಂದ ಕೈಗೂಡುತ್ತದೆ. ಸಾಮಾಜಿಕ ಸರ್ವಾಂಗೀಣ ಸಮ್ಮದ್ಧಿಯ ಮೂಲ ಕಾಯಕ. ಅದು ಅಭ್ಯುದಯದ ಆಶಾದೀಪ, ಶ್ರೇಯಸ್ಸಿನ ಸೋಪಾನ. ಕಾಯಕವೆಂದರೆ ದುಡಿತ ವೈಯಕ್ತಿಕವಾಗಿದ್ದು, ಆ ದುಡಿತದ ಫಲದಲ್ಲಿನ ಹೆಚ್ಚಿನದನ್ನು ಸಮಾಜಕ್ಕೆ ಸಲ್ಲಿಸುವಿಕೆ, ಅದರ ಪರಮಗುರಿ. ಸಾಮಾಜಿಕ ಸೌಲಭ್ಯ ಹಾಗೂ ಸಹಕಾರ. ಅಸತ್ಯದಿಂದ ಅಧಿಕ ಗಳಿಸಿ, ಸ್ವಾರ್ಥಿಯಾಗುವುದಕ್ಕಿಂತ, ಜೇನು ಹುಳುವಿನಂತೆ ಸತ್ಯಮಾರ್ಗದಿಂದ ಸ್ವಲ್ಪ ಗಳಿಸಿ, ಗಳಿಸಿರುವುದನ್ನು ಸಮೂಹದೊಡಗೂಡಿ ಬಳಸಬೇಕು.

ಕಾಗೆ ಒಂದಗುಳ ಕಂಡಡೆ ಕರೆಯದೇ ತನ್ನ ಕುಲವನೆಲ್ಲವನು?
ಕೋಳಿ ಒಂದು ಗುಟುಕ ಕಂಡಡೆ ಕೂಗದೇ ತನ್ನ ಬಳಗವೆಲ್ಲವನು?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ
ಕೋಳಿಗಿಂತ ಕರಕಷ್ಟ ಕೂಡಲಸಂಗಮದೇವಾ

ಇದ್ದುದರಲ್ಲಿಯೇ ಹತ್ತು ಮಂದಿಗೆ ಹಂಚಿ ಸದ್ಭಾವಿಯಾಗಬೇಕೇ ಹೊರತು, ಎಷ್ಟಿದ್ದರೂ ನನಗೆ ಸಾಲದು, ಇನ್ನೂ ಬೇಕು ಎಂದು ಎಣಿಸಿ, ಎಣಿಸಿ, ಯಾರಿಗೂ ನೀಡದೆ, ತಾನೂ ಉಣ್ಣದೆ ಹೂಳಿಟ್ಟು ಹೋಗುವ ಹುಚ್ಚರಾಗಬಾರದು.

ಆಯುಷ್ಯವುಂಟು, ಪ್ರಳಯವಿಲ್ಲೆಂದು ಅರ್ಥವ ಮಡಗುವಿರಿ,
ಆಯುಷ್ಯ ತೀರಿ ಪ್ರಳಯ ಬಂದಡೆ ಆ ಅರ್ಥವನುಂಬುವರಿಲ್ಲ,
ನೆಲನನಗೆದು ಮಡುಗದಿರಾ, ನೆಲನುಂಗಿದಡುಗುಳುವುದೇ?
.................................................................................
................................ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ
ಕೂಡಲಸಂಗನ ಶರಣರಿಗೆ ಒಡನೆ ಸವೆಸುವದು.

ಜಗತ್ತಿನಲ್ಲಿ ಜನರ ಅಗತ್ಯಕ್ಕನುಗುಣವಾಗಿಯೇ ಸಂಪನ್ಮೂಲಗಳ ಉತ್ಪನ್ನವಿದೆ. ಆದರೂ ಬಹು ಜನರು ಅಗತ್ಯ ವಸ್ತುಗಳಿಗಾಗಿ ಅಳಲಿ-ಬಳಲುವುದಕ್ಕೆ ಕಾರಣ, ಕೆಲವರು ಅದನ್ನು ದಾಸ್ತಾನುಗೊಳಿಸಿಗೊಂಡಿರುವುದು ಎನ್ನುತ್ತಾರೆ ಗಾಂಧೀಜಿ. ಅದೇ ಮಾತನ್ನು ಬಸವಣ್ಣನವರು ಆಯುಷ್ಯದೊಂದಿಗೆ ಪ್ರಳಯ ಅರ್ಥಾತ್ ಜೀವನದೊಂದಿಗೆ ಮರಣ ಅಂಟಿಕೊಂಡೇ ಬಂದ ಅನಿವಾರ್ಯ ಎಂಬ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಾರೆ. ನೆಲನುಂಗಿದಡುಗುಳುವುದೇ? ಎಂಬ ನುಡಿಅತ್ಯಂತ ಮೌಲಿಕವಾಗಿದ್ದು, ಸಹಕಾರ ತತ್ತ್ವದ ಜೀವಾಳವಾಗಿದೆ. ಇಟ್ಟು ಕೊಳೆಸುವುದಕ್ಕಿಂತ ಕೊಟ್ಟು ಬಳಸುವುದು ಲೇಸು ಎಂಬುದನ್ನು ಸಾರುತ್ತಿದೆ. ಧನ ಪ್ರತ್ಯುತ್ಪನ್ನದ ಕಾರ್ಯದಲ್ಲಿ ವ್ಯಕ್ತಿಗಳ ಮೂಲಕ ಚಲಾವಣೆಯಲ್ಲಿ ತೊಡಗಿದಾಗ, ಸತ್ವಶಾಲಿಯಾಗಿ ವೃದ್ಧಿಸುತ್ತದೆಯೇ ಹೊರತು, ನೆಲದಲ್ಲಿ ಹೂಳಿಟ್ಟರೆ ಸತ್ವರಹಿತವಾಗಿ ಸತ್ತಂತಾಗುತ್ತದೆ ಎಂದು ಹಣದ ಉಪಯೋಗದ ರೀತಿಯನ್ನು ಮಾರ್ಮಿಕವಾಗಿ ತಿಳಿಸುತ್ತಾರೆ.

ಅಷ್ಟೇ ಅಲ್ಲ, ಆ ಹಣವನ್ನು ಸಜ್ಜನರಿಗಾಗಿ ಸತ್ಕಾರ್ಯಕ್ಕಾಗಿ ವಿನಿಯೋಗಿಸಬೇಕೇ ಹೊರತು, ದುಷ್ಟರ ಅಟ್ಟಹಾಸದ ದುಷ್ಕಾರ್ಯಗಳಿಗಾಗಿ ಅಲ್ಲ ಎಂಬ ನೀತಿಯನ್ನು ಬೋಧಿಸುತ್ತಾರೆ.

ಹಡೆದೊಡವೆ ವಸ್ತುವನು ಮೃಢ ಭಕ್ತರಿಗಲ್ಲದೆ
ಕಡ ಬಡ್ಡಿಯ ಕೊಡಲಾಗದು,
ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು,
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ, ಇಲ್ಲಿದ್ದಡೆಯೂ ಲಿಂಗಕ್ಕೆ ನೋನ,
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ,
ಇದು ಕಾರಣ ಕೂಡಲಸಂಗಮದೇವಾ
ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು,

ಸತ್ಯಸಂಧರೂ, ನೀತಿಯುಕ್ತರೂ ಆದ ಶರಣ-ಸಜ್ಜನರಿಗೆ ಹಣದ ಸಹಕಾರ ನೀಡಬೇಕು. ಹಿಂತಿರುಗಿ ಬರದಿದ್ದರೂ ಅದು ಲಿಂಗಾರ್ಪಿತವಾಗುತ್ತದೆ. ಆರ್ಥಿಕವಾಗಿ ಕುಸಿದು ಹೋದವರಿಗೆ ಕೈ ಹಿಡಿದುಎತ್ತಿ ನಿಲ್ಲಿಸುವಲ್ಲಿ ಸಮಾಜ ಬಾಂಧವರು ಸಹಾಯ ಹಸ್ತ ಚಾಚಬೇಕು ಎಂಬುದನ್ನು ಸೂಚಿಸುತ್ತದೆ ಚೆನ್ನಬಸವಣ್ಣನವರ ಈ ವಚನ.

ಕಲ್ಪಿತದಿಂದ ಮಾಡುವ ಭಕ್ತ ನಿರ್ಧನಿಕನಾದರೆ
ತನ್ನ ಕೈಯ ಧನವ ವೆಚ್ಚಿಸಿ,
ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ,
ಅವರ ಮತ್ತೆ ದಾಸೋಹಕ್ಕೆ ನಿಲಿಸಿ……………

ಎಂಬಲ್ಲಿ ಭಕ್ತಿಯ ಅರ್ಥವೇ ಸಹಕಾರ ಎಂಬುದು ವೇದ್ಯವಾಗುತ್ತದೆ. ಸಹಕಾರದ ಭಾವ ಇಲ್ಲದವರು ಸಹಜೀವಿಯ ಬಗ್ಗೆ ಪ್ರೇಮ, ಅನುಕಂಪಗಳಿಲ್ಲದವರು ಭಕ್ತರೇ ಅಲ್ಲ ಎಂಬುದು ಶರಣರ ಅಭಿಪ್ರಾಯ.

ಮಾತಿನ ಮಾತಿನಲಪ್ಪುದೇ ಭಕ್ತಿ
ಮಾಡಿ ತನು, ನೀಡಿ ಧನ, ನೆನೆದು ಮನ ಸವೆಯದನ್ನಕ್ಕ?
ತನು ಮನ ಧನವ ಹಿಂದಿಕ್ಕಿಕೊಂಡು
ಮಾತಿನ ಬಣವೆಯ ಮುಂದಿಕ್ಕಿಕೊಂಡು
ಒಳಲೊಟೆಯ ನುಡಿವವರು ನೀವೆಲ್ಲ ಕೇಳೀರೇ
ತಲಹಿಲ್ಲದ ಕೋಲು ಹೊಳ್ಳ ಹಾರುವುದಲ್ಲದೆ
ಗುರಿಯ ತಾಗಬಲ್ಲುದೆ?

ಬರಿ ಮಾತಿನ ಸಾಂತ್ವನ ಸಾಲದು, ತನುಮನಧನವನ್ನು ಸವೆಸುವಲ್ಲಿ ವ್ಯಕ್ತವಾಗಬೇಕು. ಸಹಜೀವಿಗಳ ಕಷ್ಟವನ್ನು ಕಂಡೂ ಕಣ್ಮುಚ್ಚಿ ಕುಳಿತರೆ, ದೇವರಿಗೆ ನೀಡುವ ನೈವೇದ್ಯಕ್ಕೆ ಅರ್ಥವಿಲ್ಲ, ಅದು ಫಲಪ್ರದವೂ ಆಗದು.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ,
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ
ನೀಡಿದರೆ, ಮುಂದೆ ಸಕಳಾರ್ಥವನೀಯುವ
ನಮ್ಮ ಕೂಡಲಸಂಗಮದೇವ.

ಪರಮಾತ್ಮನು ಉಣ್ಣುವುದು, ಊಡುವುದು ಸಮಾಜದ ಮುಖದಿಂದ. ನಿಮ್ಮಲ್ಲಿದ್ದುದನ್ನು ನೀಡಿದರೆ, ನಿಮಗೆ ಬೇಕಾದುದನ್ನೆಲ್ಲ ನೀಡುತ್ತಾನೆ ಎನ್ನುತ್ತದೆ ಬಸವಣ್ಣನವರ ಅಭಯ ವಾಣಿ. ಸರ್ವರ ಸುಖದಲ್ಲಿಯೇ ಓರ್ವನ ಸುಖ ಅಡಗಿದೆ. ಒಬ್ಬ ಸುಖಿಯಾಗಿ ಅನೇಕರು ದುಃಖಿಗಳಾಗಿದ್ದರೆ, ಆ

ಒಬ್ಬನ ಸುಖಕ್ಕೆ ಭದ್ರತೆಯಿಲ್ಲ. ಆ ದೃಷ್ಟಿಯಿಂದಲಾದರೂ ಇನ್ನೊಬ್ಬರ ಸುಖದ ಚಿಂತನೆ ಅಗತ್ಯ. ಶರಣರ ಆರ್ಥಿಕ ಸಮತೆಯ ಚಿಂತನೆ ವಿಶಿಷ್ಟವಾದುದು. ಸಂಪತ್ತಿನ ಕೇಂದ್ರೀಕರಣವನ್ನು ಅವರೊಪ್ಪರು, ಅದು ಇನ್ನೊಬ್ಬರ ಹಕ್ಕಿನ ಅತಿಕ್ರಮಣ ಎಂಬ ಭಾವ ಅವರದು.

ಶರಣರ ಮನೆಯಂಗಳದಲ್ಲಿ, ದಾಸೋಹ ನಿಲಯಗಳಲ್ಲಿ, ರಾಶಿಯ ಸಂದರ್ಭದಲ್ಲಿ ಚೆಲ್ಲಿದ ಅಕ್ಕಿಯನ್ನು ಆಯ್ದು ತಂದು, ಜಂಗಮ ದಾಸೋಹದೊಂದಿಗೆ ತೃಪ್ತಿ ಪಡೆಯುವ ಆಯ್ದಕ್ಕಿ ಮಾರಯ್ಯನ ಪ್ರತಿ ದಿನದ ಕಾಯಕದ ಆದಾಯ ಒಂದು ಸೇರು ಅಕ್ಕಿ. ಆದರೆ ಅದೇನು ಕಾರಣವೋ, ಒಂದು ದಿನ ಎರಡು ಸೇರು ತಂದಾಗ, ಶರಣ ಸತಿ ಲಕ್ಕಮ್ಮ-

"ಒಮ್ಮನವ ಮೀರಿ ಇಮ್ಮನದಲ್ಲಿ ಏಕೆ ತಂದಿರಿ?" ಎಂದು ಕೇಳುತ್ತಾಳೆ, ಅಲ್ಲದೆ ಈ ಒಂದು ಹೆಚ್ಚಿನ ಸೇರು ಮತ್ತೊಬ್ಬರ ಪಾಲಿನದು. ನಾವು ಪಡೆದರೆ ದೇವರು ಮೆಚ್ಚಲಾರ. ಅಲ್ಲಿಯೇ ಸುರಿದು ಬನ್ನಿ, ಸಂಬಂಧಿಸಿದವರು ಒಯ್ಯಲಿ ಎಂಬ ಮಾತು, ಅರ್ಥವ್ಯವಸ್ಥೆಯ ಜೀವಾಳವಾದ ಸಂಪತ್ತಿನ ಸಮಾನ ಹಂಚಿಕೆಯ ತತ್ತ್ವವನ್ನು ತಿಳಿಸುತ್ತದೆ.

ಶರಣೆ ಲಕ್ಕಮ್ಮ ಹೆಚ್ಚು ಅಕ್ಕಿ ಚೆಲ್ಲಿಸಿ, ತಮ್ಮ ಕಾಯಕ ನಿಷ್ಠೆಯ ಪರೀಕ್ಷೆಗೈದ, ಬಸವಣ್ಣನವರೇ ಮೊದಲಾದ ಅನುಭವ ಮಂಟಪದ ಶರಣ ಗಣಕ್ಕೆ, ಪ್ರಸಾದಕ್ಕೆ ಬಿನ್ನಹ ಮಾಡಿ ಬರಬೇಕೆಂದು ಪತಿ ಮಾರಯ್ಯನವರನ್ನು ಕಳಿಸುತ್ತಾಳೆ.

> ಬಸವಣ್ಣ, ಚೆನ್ನ ಬಸವಣ್ಣ, ಪ್ರಭುದೇವರು ಮೊದಲಾದ
> ನೇಮ ನಿತ್ಯ ಕೃತ್ಯ ಸಕಲ ಸಮೂಹ ನಿತ್ಯ ನೇಮದ
> ಜಂಗಮ ಭಕ್ತರು, ಗಣಂಗಳು ಮುಂತಾದ ಸಮೂಹ ಸಂಪದಕ್ಕೆ
> ನೈವೇದ್ಯಕ್ಕೆ ವೇಳೆಯೆಂದು ಹೇಳಿ ಬಾರಯ್ಯಾ,
> ಅಮರೇಶ್ವರಲಿಂಗದ ಮನೆಯಲ್ಲಿ ಆದೀತೆಂದು

ಏನು ಕೆಚ್ಚು? ಅದೆಂಥ ನೆಚ್ಚು? ಒಂದು ಸೇರು ಅಕ್ಕಿಯಲ್ಲಿ ಸಕಲ ಶರಣ ಸಮೂಹಕ್ಕೆ ಪ್ರಸಾದ ನೀಡುವ ಈ ಧೈರ್ಯದ ನುಡಿಗೆ ಆಧಾರ ಯಾವುದು? ಇಲ್ಲದುದಕ್ಕೆ ಕಡ ಮಾಡುವವರಲ್ಲ, ಇದ್ದುದನ್ನು ನಾಳೆಗೆಂದು ಸಂಗ್ರಹಿಸಿಟ್ಟುಕೊಳ್ಳುವವರಲ್ಲ. ದೇವರು ಸತ್ತಂದಿಗಲ್ಲದೆ ಸಂಗ್ರಹದ ಬಗ್ಗೆ ಚಿಂತಿಸಬೇಡ ಎಂದ ಶರಣರಿವರು. ತಕ್ಷಣವೇ ಶರಣರೆಲ್ಲರಿಗೆ ಪ್ರಸಾದವನ್ನಿಕ್ಕಿ ತೃಪ್ತಿಗೈಸಿದರೆಂದರೆ ನಡೆದ ಪವಾಡ ಯಾವುದು?

ಶರಣರು ಸಹಕಾರದ ಜೀವನ. ತಾವು ಗಳಿಸಿ, ಬಳಸಿ, ಉಳಿದುದನ್ನು ಸಾಮೂಹಿಕವಾಗಿ ದಾಸೋಹದ ಮನೆಯಲ್ಲಿ ದಾಸ್ತಾನುಗೊಳಿಸುತ್ತಿದ್ದರು. ಅದು ವೈಯಕ್ತಿಕವಾದುದಾಗಿರದೆ, ಸಾಮೂಹಿಕವಾದುದಾಗಿರುತ್ತಿತ್ತು. ಆಕಸ್ಮಿಕವಾಗಿ ಹೆಚ್ಚಿನ ಅವಶ್ಯಕತೆಯುಂಟಾದರೆ ಆ ದಾಸ್ತಾನನ್ನು ಬಳಸುತ್ತಿದ್ದರು ಎಂಬುದು ವಿಚಾರದ ಹೊಳಹಿನಲ್ಲಿ ವೇದ್ಯವಾಗುವ ಸತ್ಯವಾಗಿದೆ.

ಸ್ವಂತ ಜೀವನವನ್ನು ಸ್ವಾವಲಂಬಿಯಾಗಿಸಿ, ಸುಖಮಯವಾಗಿಸಿ, ಸಾಮಾಜಿಕ ಜೀವನದ ಆಧಾರಸ್ಥಂಭವಾಗಿ ನಿಂತು, ಸಹಕಾರದ ಸರ್ವಾದರಣೀಯ, ಸೌಜನ್ಯ ಜೀವನದ ತತ್ವವನ್ನು ಜಗತ್ತಿಗೆ ನೀಡಿದ ಕೀರ್ತಿ ಶರಣರದ್ದು. ಗಳಿಕೆಯ ಸೂತ್ರವಾಗಿ ಕಾಯಕ, ಬಳಕೆಯ ಮಾರ್ಗವಾಗಿ ದಾಸೋಹ ಇರುವವರೆಗೆ ಜಗತ್ತಿನಲ್ಲಿ ಬಡತನವಿಲ್ಲ.

> ಭಕ್ತಿ ವಿಶೇಷವ ಮಾಡುವಡೆ ಹತ್ತು ಬೆರಳುಂಟು,
> ಹಾಸಿ ದುಡಿವಡೆ ತನಗುಂಟು,
> ತನ್ನ ಪ್ರಮಥರಿಗುಂಟು. ಎಂಬ ಬಸವಣ್ಣನವರ ನುಡಿ,
> ಐದು ಇಲ್ಲವಾದಂದಿಗಲ್ಲದೆ ಜಗದೊಳಗಾರಿಗೂ
> ಬಡತನವಲ್ಲದಿಲ್ಲ, ಐದು ಉಳ್ಳನಕ್ಕ
> ಸಕಲ ಜೀವನಕ್ಕೆ ಚೇತನ, ಮಾರಯ್ಯ ಪ್ರಿಯ
> ಅಮರೇಶ್ವರಲಿಂಗ ಉಳ್ಳನಕ್ಕ ಧನಮನ ಸಂಪನ್ನರು.

ಎಂಬ ಲಕ್ಕಮ್ಮ ಶರಣೆಯ ನುಡಿಗಳು ಸಹಕಾರ ಜೀವನದಿಂದ ಸಾಮಾಜಿಕ ಐಕ್ಯ, ಆರ್ಥಿಕೋನ್ನತಿ ಉಂಟಾಗಿ, ಬಡತನ ನೀಗಿ, ಬೇಡಿ ಬಾಳುವುದು ಇಲ್ಲವಾಗಿ ಉಣಲು-ಉಡಲು ಸಮೃದ್ಧಿಯಾಗುತ್ತದೆ. ವ್ಯಕ್ತಿಯಿಂದ ಸಮಾಜಕ್ಕೂ, ಸಮಾಜದಿಂದ ವ್ಯಕ್ತಿಗೂ ಆಸರೆ ದೊರೆತು, ವ್ಯಕ್ತಿಯ ಶಕ್ತಿ ಸಮಾಜಕ್ಕೆ ಉಪಯೋಗವಾಗಿ, ಸಮಾಜ ಶಕ್ತಿಯ ನೆರವು ವ್ಯಕ್ತಿಗೂ ಒದಗಿ, ಸಹಕಾರ ಸಮನ್ವಯಗಳುಳ್ಳ ನವ ಸಮಾಜ ನಿರ್ಮಾಣಗೈದು ಮರ್ತ್ಯಲೋಕದ ಬದುಕು ಹಸನಾಗಿಸಿದ ಕೀರ್ತಿ ಬಸವಾದಿ ಶರಣರ ವಚನ ಸಾಹಿತ್ಯಕ್ಕೆ ಸಲ್ಲುತ್ತದೆ.

ಒಟ್ಟಾರೆ ವಚನ ಸಾಹಿತ್ಯದಲ್ಲಿ ಬರುವ ಭಕ್ತಿ, ಕಾಯಕ-ದಾಸೋಹ, ಶರಣರ ಸಂಗ ಒಂದೊಂದೂ ಸಹಕಾರದ ಬದುಕಿನ ವಿವಿಧ ಮಗ್ಗಲುಗಳಾಗಿವೆ.

**ಆಕರ ಗ್ರಂಥಗಳು**

೧) ಕನ್ನಡ ವಿಷಯ ಕೋಶ ಸಂ-೧
೨) ಕನ್ನಡ ವಿಷಯ ಕೋಶ ಸಂ-೨
೩) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ (ಕಲೆ, ಸಾಹಿತ್ಯ-೫)
೪) ಕ್ರಾಂತಿಕಾರಿ ಶರಣ ಕೆಂಭಾವಿ ಭೋಗಣ್ಣ – ಡಾ. ರಾಜಶೇಖರ ಬಿರಾದಾರ
೫) ಬಸವ ಪಥ ಸಂ-೪೩
೬) ಹಡಪದ ಲಿಂಗಮ್ಮ – ಡಾ. ಪುಟ್ಟಮಣಿ ದೇವಿದಾಸ